



ಕೊರಳಹಾರಕ್ಕೆ ಶೋಭೆ ತಂದಿರುವ ನೀಲಿ ವಜ್ರ

ಇತಿಹಾಸದ ಪಳೆಯುಳಿಕೆಗಳಂತಿರುವ ಇಲ್ಲಿನ ದೇವಾಲಯ, ಕಲ್ಯಾಣಿ, ಮಸೀದಿ, ಅರಮನೆ, ಧಾನ್ಯ ಸಂಗ್ರಹಾಲಯ, ಗರಡಿ ಮನೆ ಎಲ್ಲವನ್ನೂ ಮೂರೂ ಕಡೆಗಳಿಂದ ಕಣಿವೆ ಆವರಿಸಿದೆ. ಕಣಿವೆ ಎಂದರೆ ಅದೊಂದು ದುರ್ಗಮ ಪ್ರಪಾತ. ಕಣಿವೆಯ ಆಳದಲ್ಲಿ ಹರಿಯುವ ಪೆನ್ನಾರ್ ನದಿ ದಶಲಕ್ಷ ವರ್ಷಗಳಿಂದ ಎರ್ರಮಲ (ಕೆಂಪುಬೆಟ್ಟಗಳು) ಶ್ರೇಣಿಯ ಬೆಟ್ಟಗುಡ್ಡಗಳನ್ನು ಕೇಕ್ ಕತ್ತರಿಸಿದಂತೆ ಕತ್ತರಿಸಿದ್ದು, ಪ್ರಪಾತದ ಎರಡೂ ಕಡೆ ಸುಮಾರು ನಾಲ್ಕುನೂರು ಅಡಿಗಳಷ್ಟು ಎತ್ತರದ ಅಭೇದ್ಯವಾದ ಕೆಂಪು ಬಂಡೆಗಳ ಗೋಡೆಯೇ ನಿರ್ಮಾಣವಾಗಿದೆ.

ಬಂಡೆಗಳ ಮೇಲೆ ನಿಂತು ನೋಡಿದರೆ, ಶಾಂತವಾಗಿ ಬಾಗಿ ಬಳುಕುತ್ತಾ ಆಳವಾದ ಕಮರಿಯಲ್ಲಿ ಹಸಿರುಬಣ್ಣದಲ್ಲಿ ಹರಿಯುವ ಪೆನ್ನಾರ್ ನದಿ, ಸುತ್ತ ಆವರಿಸಿದ ಕೆಂಪು ಬಂಡೆಗಳು, ನಮಗೆ ನಿಸರ್ಗದ ಚಮತ್ಕಾರದಂತೆ ಭಾಸವಾಗುತ್ತವೆ. ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ವಿವಿಧ ರೀತಿಯಲ್ಲಿ, ಸೂರ್ಯನಿಲ್ಲದ ಮೋಡ ಮುಸುಕಿದಾಗಲೂ ಮತ್ತೊಂದು ರೀತಿಯಲ್ಲಿ ಕಾಣುವ ಇಲ್ಲಿನ ಭೂದೃಶ್ಯವನ್ನು ನೋಡಿಯೇ ಸವಿಯಬೇಕು.

## ಗಂಡಿಕೋಟ ಕೋಟೆ

ಕಡಪಾ ಜಿಲ್ಲೆಯ ಜಮ್ಮಲಮಡಗುವಿನಿಂದ 15 ಕಿ.ಮೀ. ದೂರದಲ್ಲಿರುವುದೇ ಗಂಡಿಕೋಟ. ಭಾರತದ ಅಭೇದ್ಯ ಕೋಟೆಗಳಲ್ಲೊಂದು ಎಂದೇ ಹೆಸರಾಗಿದ್ದ ಈ ಸ್ಥಳವನ್ನು ಕಲ್ಯಾಣ ಚಾಲುಕ್ಯರು, ಪೆಮ್ಮಸಾನಿ ನಾಯಕರು ಹಾಗೂ ಗೋಲ್ಕಂಡಾ ಸುಲ್ತಾನರು ಆಳ್ವಿಕೆ ನಡೆಸಿದ್ದಾರೆ. ಪೆಮ್ಮಸಾನಿ ನಾಯಕರ ವಂಶಸ್ಥರು ಇಲ್ಲಿ ಸುಮಾರು 300 ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದರು.

ಪ್ರಪಾತದ ಗೋಡೆಗಳನ್ನೇ ರಕ್ಷಣಾತ್ಮಕವಾಗಿ ಬಳಸಿಕೊಂಡು ಅಂದಿನ ರಾಜರು ಗಂಡಿಕೋಟೆಯನ್ನು ನಿರ್ಮಿಸಿದ್ದರು. ಹಾಗಾಗಿ ಅದೊಂದು ಅಭೇದ್ಯವಾದ ಕೋಟೆಯೆಂದು ಹೆಸರಾಗಿತ್ತು. ಸುಮಾರು 14ನೇ ಶತಮಾನದ ಆದಿಭಾಗದಲ್ಲಿ ಪ್ರಾರಂಭವಾದ ಈ ಕೋಟೆಯನ್ನು ಹಲವು ಹಂತಗಳಲ್ಲಿ ಕಟ್ಟಲಾಗಿದೆ.

ಇಲ್ಲಿನ ಪ್ರಮುಖರಾದ ರಾಜರು ಪೆಮ್ಮಸಾನಿ ನಾಯಕರು. ಪೆಮ್ಮಸಾನಿ ನಾಯಕರು ಹಲವಾರು ಯುದ್ಧಗಳಲ್ಲಿ ವಿಜಯನಗರದ ಪರವಾಗಿ ನಿಂತಿದ್ದರು. ಕೃಷ್ಣದೇವರಾಯನ ಅಳಿಯ ರಾಮರಾಯ ಕೂಡ ಒಮ್ಮೆ ಈ ಕೋಟೆಯಲ್ಲಿ ಆಶ್ರಯ ಪಡೆದಿದ್ದ. ಆಗ ಬಂಗಾರು ತಿಮ್ಮನಾಯ್ಡು ಎಂಬ ಇಲ್ಲಿನ ರಾಜ ರಾಮರಾಯನ ಶತ್ರುಗಳನ್ನು ಸೋಲಿಸಿ ಆತನಿಗೆ ಜಯ ತಂದುಕೊಟ್ಟಿದ್ದ. ಗಂಡಿಕೋಟೆಯ ನಾಯಕರು ಎಂದೂ ತಮ್ಮನ್ನು ಸಂಪೂರ್ಣ ಸ್ವತಂತ್ರ ರಾಜರೆಂದು ಘೋಷಿಸಿಕೊಂಡಿರಲಿಲ್ಲ. ವಿಜಯನಗರದ ಸ್ನೇಹಿಗಳಾಗಿಯೂ ಬೆಂಬಲಿಗರಾಗಿಯೂ ಸಾಮಂತರಂತೆಯೂ ಇದ್ದವರು.

ಗೋಲ್ಕೊಂಡಾ ಸುಲ್ತಾನನ ಮಂತ್ರಿ ಹಾಗೂ ದಂಡನಾಯಕ ಮೀರ್ ಜುಮ್ಲಾ ಚಿನ್ನತಿಮ್ಮನಾಯ್ಡುವಿನಿಂದ ಈ ಕೋಟೆಯನ್ನು ಕಸಿದುಕೊಂಡ. ಮೀರ್ ಜುಮ್ಲಾ ಈ ಕೋಟೆಯನ್ನು ಭೇದಿಸಲಾಗದೆ, ಕೊನೆಗೆ ಗಂಡಿಕೋಟೆಯ ಮಂತ್ರಿ ಪೊಡಿಲಿ ಲಿಂಗಣ್ಣನ ಜೊತೆ ಷಡ್ಯಂತ್ರ ಹೂಡಿ, ಆ ಮಂತ್ರಿ ಮೋಸದಿಂದ ಚಿನ್ನತಿಮ್ಮನಾಯ್ಡುಗೆ ವಿಷ ಹಾಕಿ ಕೊಲೆಮಾಡಿದನೆಂದೂ ಕೆಲ ಚರಿತ್ರಕಾರರು ಹೇಳುವರು.

## ಟ್ರಾವರ್ನಿಯರ್ ಬ್ಲೂ

ಆಗಿನ ಕಾಲದಲ್ಲಿ ಭಾರತದ ಬಹುಪಾಲು ವಜ್ರಗಳು ಬರುತ್ತಿದ್ದದ್ದೇ ಗೋಲ್ಕೊಂಡಾ ಮತ್ತು ಗಂಡಿಕೋಟೆಯ ಸುತ್ತಲ ಪ್ರದೇಶಗಳಿಂದ. ಗೋಲ್ಕೊಂಡದ ಪ್ರಸಿದ್ಧ ವಜ್ರಗಳು ಬರುತ್ತಿದ್ದದ್ದೇ ಗಂಡಿಕೋಟೆ, ಗುಂಟೂರಿನ ಬಳಿಯ ಕೊಲ್ಲೂರು, ಪರಿಟಾಲ ಮುಂತಾದ ಕಡೆಯಿದ್ದ ಗಣಿಗಳಿಂದ. ಪ್ರಸಿದ್ಧ ಕೊಹಿನೂರ್ ವಜ್ರ ಬಂದದ್ದು ಕೊಲ್ಲೂರಿನಿಂದ. ಹಾಗೆಯೇ ಟ್ರಾವರ್ನಿಯರ್ ಬ್ಲೂ ಕೂಡ ಕೊಲ್ಲೂರಿನ ಗಣಿಯಲ್ಲೇ ಸಿಕ್ಕಿದ್ದು ಎನ್ನುವರು.

ಫ್ರಾನ್ಸ್ ದೇಶದ ವ್ಯಾಪಾರಿ ಟ್ರಾವರ್ನಿಯರ್ ಈ ಕೋಟೆ ಮೀರ್ ಜುಮ್ಲಾ ವಶವಾದ ಬಳಿಕ ಇಲ್ಲಿ ಬಂದು ಕೆಲವು ದಿನ ಕಳೆಯುತ್ತಾನೆ. ಮೀರ್ ಜುಮ್ಲ ವಿಶೇಷವಾದ ಸ್ವಾಗತ ನೀಡುವುದರ ಜೊತೆಗೆ, ಆತನನ್ನು ತನ್ನ ಪ್ರಮುಖ ಅತಿಥಿಯಂತೆ ಕಾಣುತ್ತಾನೆ. ಗಂಡಿಕೋಟದ ಚಿನ್ನತಿಮ್ಮನಾಯ್ಡುವಿನಿಂದ ಕೋಟೆಯೊಂದಿಗೆ ವಜ್ರವೈಢೂರ್ಯಗಳನ್ನೆಲ್ಲಾ ಗೆದ್ದ ಮೀರ್ ಜುಮ್ಲಾ, ಈ ನೀಲಿ ವಜ್ರವನ್ನು ಟ್ರಾವರ್ನಿಯರ್‌ಗೆ ಮಾರುತ್ತಾನೆ. ಟ್ರಾವರ್ನಿಯರ್ ಭಾರತದಿಂದ ಹೊತ್ತೊಯ್ದ ಜಗತ್ಪ್ರಸಿದ್ಧ ವಜ್ರಕ್ಕೆ 'ಟ್ರಾವರ್ನಿಯರ್ ಬ್ಲೂ' ಎನ್ನುವ ಹೆಸರು ಬಂತು.

ಅತ್ಯಂತ ಸುಂದರವಾದ ಈ ವಜ್ರವನ್ನು ಹೊಂದಿದವರಿಗೆ ಕೆಡುಕಾಗುತ್ತದೆ ಎಂಬ ಅಪಖ್ಯಾತಿ ಇದರದ್ದು. ಟ್ರಾವರ್ನಿಯರ್ ಭಾರತದಿಂದ ಹೊತ್ತೊಯ್ದ ವಜ್ರ 112 ಕ್ಯಾರಟ್ ಇತ್ತು. ಆತ ಅದನ್ನು ಫ್ರಾನ್ಸ್ ದೊರೆ 14ನೇ ಲೂಯಿಸ್‌ಗೆ ಮಾರಿದ. ಅಲ್ಲಿ ಅದು ಹೊಳಪನ್ನು ಪಡೆದು 67 ಕ್ಯಾರೆಟ್‌ಗೆ ಕುಗ್ಗಿ, ರಾಜನ ಕಂಠೀಹಾರದಲ್ಲಿ ಸ್ಥಾನ ಪಡೆದು, 'ಫ್ರೆಂಚ್ ಬ್ಲೂ' ಎಂಬ ಹೆಸರು ಪಡೆಯಿತು. ಮುಂದೆ ನಡೆದ ಫ್ರೆಂಚ್ ಕ್ರಾಂತಿಯಲ್ಲಿ ರಾಜನ ತಲೆ ಹೋಗುತ್ತದೆ, ನೀಲಿ ವಜ್ರ ಕಾಣೆಯಾಗುತ್ತದೆ. 1792ರಲ್ಲಿ ಮಾಯವಾದ ವಜ್ರ 1812ರಲ್ಲಿ ಇಂಗ್ಲೆಂಡಿನ ವ್ಯಾಪಾರಿಯೊಬ್ಬನ ಬಳಿ ಇದ್ದುದಾಗಿ ಹೇಳಲಾಗುತ್ತದೆ. 1839ರಲ್ಲಿ ಈ ವಜ್ರದ ಅಧಿಕೃತ ಮಾಲೀಕ ಹೆನ್ರಿ ಫಿಲಿಪ್ ಹೋಪ್ ಎಂದು ದಾಖಲಾಗಿದ್ದು, ಅವನಿಂದಾಗಿಯೇ ಇದಕ್ಕೆ 'ಹೋಪ್ ಡೈಮೆಂಡ್' ಎಂಬ ಹೆಸರು ಬಂದಿತು.

ಹೋಪ್ ಕುಟುಂಬದವರಿಂದ ಮಾರಾಟವಾಗಿ ಅದು ನ್ಯೂಯಾರ್ಕ್‌ಗೆ ತಲುಪಿ, ನಂತರ ಪ್ಯಾರಿಸ್‌ನಲ್ಲಿ ಹರಾಜಾಗಿ ಪಿಯರಿ ಕಾರ್ಟಿಯರ್ ಮುಖಾಂತರ ಅಮೆರಿಕೆಯ ಮೆಕ್ಲೀನ್ ಎಂಬ ಸಿರಿವಂತ ಮಹಿಳೆಯ ಪಾಲಾಯಿತು. ಆಗ ಈ ವಜ್ರವು ನೆಕ್ಲೇಸಿನ ಪೆಂಡೆಂಟ್ ಸ್ವರೂಪ ಪಡೆದುಕೊಂಡಿತು. ಈ ವಜ್ರ ಯಾರ ಬಳಿ ಬರುತ್ತಿತ್ತೋ ಅವರೆಲ್ಲರೂ ಹಣಕಾಸಿನ ಮುಗ್ಗಟ್ಟಿನಿಂದಲೋ ಅಥವಾ ಯಾವುದೋ ಸಮಸ್ಯೆಗೆ ಒಳಗಾದದ್ದು ಅದಕ್ಕೆ ಅಪಖ್ಯಾತಿಯನ್ನು ತಂದಿಟ್ಟಿತ್ತು.

1947ರಲ್ಲಿ ಮೆಕ್ಲೀನ್ ನಿಧನದ ನಂತರ ಆಕೆಯಲ್ಲಿದ್ದ ಅಷ್ಟೂ ವಜ್ರ ವೈಢೂರ್ಯಗಳನ್ನು ನ್ಯೂಯಾರ್ಕ್‌ನ ಹ್ಯಾರಿ ವಿನ್‌ಸ್ಟನ್ ಎಂಬ ಕಂಪನಿ ಕೊಂಡುಕೊಂಡಿತು. ಸುಮಾರು ಹತ್ತು ವರ್ಷಗಳ ಕಾಲ ಅವುಗಳ ಪ್ರದರ್ಶನವನ್ನು ವಿವಿದೆಡೆ ಏರ್ಪಡಿಸುತ್ತಿದ್ದ ಕಂಪನಿ, ಈ ನೀಲಿ ವಜ್ರವನ್ನು ನವೆಂಬರ್ 10, 1958ರಲ್ಲಿ ಸ್ಮಿತ್ ಸೋನಿಯನ್ ವಿಶ್ವವಿದ್ಯಾಲಯಕ್ಕೆ ಕೊಡುಗೆಯಾಗಿ ನೀಡಿತು.

ಪ್ರತಿಕ್ರಿಯಿಸಿ: feedback@sudha.co.in